ವಿಜಯವಾಣಿ
ಕನ್ನಡಿಗರ ಧ್ವನಿ

ಜೈನ್ ವಿವಿ ನಿರ್ದೇಶಕ ಡಾ.ವಾಸು ಸಲಹೆ

# ಪಠ್ಯೇತರ ಚಟುವಟಿಕೆಗೂ ಆದ್ಯತೆ ನೀಡಿ

ಬೆಂಗಳೂರು: ವಿದ್ಯಾರ್ಥಿಗಳು ಪಠ್ಯಕ್ಕೆ ನೀಡುವ ಪ್ರಾಮುಖ್ಯವನ್ನು ಪಠ್ಯೇತರ ಚಟುವಟಿಕೆಗೂ ನೀಡಬೇಕು ಎಂದು ಜೈನ್ ವಿಶ್ವವಿದ್ಯಾಲಯದ ನಿರ್ದೇಶಕ ಡಾ.ಬಿ.ಎ. ವಾಸು ಹೇಳಿದ್ದಾರೆ.

ಜಯನಗರದ 9ನೇ ಬ್ಲಾಕ್‌ನಲ್ಲಿರುವ ಜೈನ್ ವಿವಿಯ ಸ್ಕೂಲ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಮತ್ತು 'ವಿಜಯವಾಣಿ' ಮಾಧ್ಯಮ ಸಹಯೋಗದೊಂದಿಗೆ ಆಯೋಜಿಸಿರುವ ಎರಡು ದಿನಗಳ 'ಎಲಿನಾ 2.0' ಅಂತರ ಕಾಲೇಜು ಉತ್ಸವಕ್ಕೆ ಬುಧವಾರ ಚಾಲನೆ ನೀಡಿ ಮಾತನಾಡಿದರು.

ವಿದ್ಯಾರ್ಥಿಗಳು ಓದಿನ ಕಡೆ ಹೆಚ್ಚು ಗಮನ ನೀಡುವುದು ಸಹಜ. ಆದರೆ ಸಾಂಸ್ಕೃತಿಕ ಸ್ಪರ್ಧೆ, ಕ್ರೀಡೆ ಮುಂತಾದವು ಮನೋಲ್ಲಾಸದೊಂದಿಗೆ ದೈಹಿಕ ಬೆಳವಣಿಗೆಗೆ ಸಹಕರಿಸುತ್ತವೆ. ವ್ಯಕ್ತಿತ್ವ ವಿಕಸನಕ್ಕೆ ಇವು ಪೂರಕ ಅಂಶಗಳು ಎಂದರು. ಇತರ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಪ್ರತಿಭಾ ಪ್ರದರ್ಶನಕ್ಕೆ ವೇದಿಕೆ ಕಲ್ಪಿಸಿಕೊಡಲು ನಮ್ಮ ವಿದ್ಯಾರ್ಥಿಗಳು ಎರಡನೇ ವರ್ಷ ಎಲಿನಾ ಎಂಬ ಅಂತರ ಕಾಲೇಜು ಉತ್ಸವ ನಡೆಸುತ್ತಿದ್ದಾರೆ. ವಿದ್ಯಾರ್ಥಿಗಳೇ ಆಧಾರಸ್ತಂಭವಾಗಿ ನಿಂತು ಈ ಕಾರ್ಯಕ್ರಮ ಆಯೋಜಿಸುತ್ತಿರುವುದು ಶ್ಲಾಘನೀಯ ಎಂದರು. ಉಪನ್ಯಾಸಕರಾದ ಸುರೇಶ್, ಸಪ್ನಾ, ಸೋನಾಲಿ, ಸ್ಮಿತಾ, ವಿದ್ಯಾರ್ಥಿ ಸಂಘದ ಅಧ್ಯಕ್ಷ ಸಿದ್ಧಾರ್ಥ ಭಾಗವಹಿಸಿದ್ದರು.



'ಎಲಿನಾ 2.0' ಉತ್ಸವವನ್ನು ಜೈನ್ ವಿವಿ ನಿರ್ದೇಶಕ ಡಾ.ಬಿ.ಎ. ವಾಸು ಉದ್ಘಾಟಿಸಿದರು.

## 12 ಕಾಲೇಜುಗಳು ಭಾಗಿ

ಬೆಂಕಿ ಇಲ್ಲದ ಅಡುಗೆ, ನಿಧಿ ಶೋಧನೆ, ಸಿನಿಮಾ ನಿರ್ಮಾಣ, ಕೋಡಿಂಗ್ ಆ್ಯಂಡ್ ಡಿಕೋಡಿಂಗ್, ಬೆಸ್ಟ್ ಮ್ಯಾನೇಜರ್, ಐಸ್ ಬ್ರೇಕರ್, ಫೇಸ್ ಪೇಂಟಿಂಗ್, ಥೀಮ್ ಫೋಟೋಗ್ರಫಿ ಸೇರಿ ಸಾಕಷ್ಟು ಸ್ಪರ್ಧೆಗಳು ನಡೆದವು. ಈ ಸ್ಪರ್ಧೆಯಲ್ಲಿ 12 ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಇಂದು ಸಮಾರೋಪ

ಗುರುವಾರ ಸಂಜೆ 5ಕ್ಕೆ ಸಮಾರೋಪ ನಡೆಯಲಿದೆ. ನಟಿ ಹರ್ಷಿಕಾ ಪೂಣಚ್ಚ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಿದ್ದಾರೆ.